ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ದಾಳಿ

2855 (3570) ಶ್ರೀ ರಾಮದಾಸ್.ಎ. (ಕೃಷ್ಣರಾಜ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕೆ.ಪಿ.ಟಿ.ಸಿ.ಎಲ್.ಸಿ ಎಷ್ಟು ಜನ ಅಧಿಕಾರಿಗಳ ಮನೆಗಳನ್ನು ಲೋಕಾಯುಕ್ತ ದಾಳಿ ಮಾಡಲಾಯಿತು;

ಆ) ಈ ದಾಳಿಗಳನ್ನು ಯಾವ ನಿಯಮಾವಳಿಂತೆ ಮಾಡಲಾಗಿದೆ; ಯಾರ ಸೂಚನೆ ಮೇರೆಗೆ ಮತ್ತು ಯಾರ ದೂರಿನ ಮೇರೆಗೆ ಈ ದಾಳಿಗಳನ್ನು ಮಾಡಲಾಗಿದೆ;

ಇ) ಯಾವ ಯಾವ ಪ್ರಕಗಣಗಳು ಯಾವ ಯಾವ ಹಂತದಲ್ಲಿದೆ;

ಈ) ತಾಂತ್ರಿಕ ಸದಸ್ಯರಾಗಿದ್ದ ಶ್ರೀ ಪಾಲೀಕರ್ ಅವರ ಮನೆ ಮೇಲೆ ದಾಳಿ ನಡೆದಿತ್ತೆ; ನಡೆದಿದ್ದರೆ; ಎಷ್ಟು ಹಣ, ಆಭರಣ ಆಸ್ತಿ, ಪಾಸ್ತಿ, ಪತ್ತೆ ಹಚ್ಚಲಾಯಿತು; ಏನು ಕ್ರಮ ಕೈಗೊಳ್ಳಲಾಯಿತು; ದೋಷಾರೋಪ ಪಟ್ಟಿ ಯಾವಾಗ ಸಲ್ಲಿಸಲಾಯಿತು;

ಉ) ಅಂದಿನಿಂದ ಇಲ್ಲಿಯವರೆಗೆ ಈ ಅಧಿಕಾರಿ ಯಾವ ಯಾವ ಸ್ಥಳದಲ್ಲಿ ಕೆಲಸ ನಿರ್ವಹಿಸಿದ್ದಾರೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿ):-

ಅ) 02

ಆ) ಕಲಂ 13(1)(ಇ), (2) ಲಂಚ ನಿರೋಧಕ ಕಾಯ್ದೆ ಅಡಿಯಲ್ಲಿ ಸಂಬಂಧಪಟ್ಟ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರ ಸೂಚನೆಯ ಮೇರೆಗೆ ಮತ್ತು ಲೋಕಾಯುಕ್ತದಲ್ಲಿ ಕೆಲಸ ನಿರ್ವಹಿಸುತ್ತಿರುವ ಪೋಲೀಸ್ ಅಧಿಕಾರಿಗಳು ಸಂಗ್ರಹಿಸಿದ ಮಾಹಿತಿವರದಿಗಳ ದೂರಿನ ಮೇಲೆ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ

ಇ) ತನಿಖಾ ಹಂತದಲ್ಲಿದೆ

ಈ)-ಇಲ್ಲಾ-

ಉ) ಐಟಂ (ಈ) ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದಿನಗೂಲಿ ನೌಕರರ ವರ್ಗಾವಣೆ

2856(3643) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಕೃಷ್ಣ ರಾಜ):- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ: ಇಲಾಖೆಯಡಿಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಮತ್ತು ತಾತ್ಕಾಲಿಕ ನೌಕರರನ್ನು ವರ್ಗಾವಣೆ ಮಾಡಲು ನಿಯಮಗಳಲ್ಲಿ, ಅವಕಾಶವಿದೆಯೇ;